ನಮ್ಮ ತಂದೆಯವರು ಮಾಡಿದ ಪ್ರಗತಿ ಕೆಲಸಗಳು ಮಾತನಾಡುತ್ತವೆ: ಪ್ರಿಯಾಂಕಾ ಜಾರಕಿಹೊಳಿ

ಯಮಕನಮರಡಿ:– ಯಮಕನಮರಡಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕಾಂಗ್ರೇಸ್, ಪಕ್ಷದ ಮುಖಂಡರ ಹಾಗೂ ಕಾರ್ಯಕರ್ತರ ಸಹಕಾರದಿಂದ ಈ ಬಾರಿ ತಮ್ಮ ಮನೆಗಳಂತೆ ಕಂಡು ನನಗೆ ಉತ್ತಮವಾದ ಪ್ರೋತ್ಸಾಹ ನೀಡುತ್ತಿದ್ದಾರೆಂದು ಚಿಕ್ಕೋಡಿ ಲೋಕಸಭೆಯ ಅಧಿಕೃತ ಅಭ್ಯರ್ಥಿಯಾದ ಕು॥ಪ್ರೀಯಾಂಕಾ ಜಾರಕಿಹೋಳಿ, ಹೇಳಿದರು, ಅವರು ಉಳ್ಳಾಗಡ್ಡಿ–ಖಾನಾಪೂರ, ಹಂಚಿನಾಳ, ಹಾಗೂ ಕುರಣಿ ಗ್ರಾಮಗಳಲ್ಲಿ ಕಾಂಗ್ರೇಸ್ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಾ "ನಾವು ಮಾತನಾಡದಿದ್ದರು ಕೂಡಾ ತಂದೆ ಸತೀಶ ಜಾರಕಿಹೊಳಿಯವರು ಮಾಡಿದ ಪ್ರಗತಿಪರ ಕೆಲಸಗಳು ಮಾತನಾಡುತ್ತಿವೆ" ಮುಂಬರುವ ದಿನಗಳಲ್ಲಿ ಯುವಕ–ಯುವತಿಯರಿಗೆ ಸ್ವಯಂ ಉದ್ಯೋಗ ಹಾಗೂ ಉದ್ಯೋಗ ಸೃಷ್ಠಿಸುವಂಥ ಕೆಲಸಗಳನ್ನು ಕೈ ಗೊಂಡು ಮತ್ತಷ್ಟು ಜನಸೇವೆ ಮಾಡುತ್ತೇವೆ, ಆ ಕೆಲಸಗಳು ನಮಗೆ ಶ್ರೀರಕ್ಷೆಯಾಗುವುದರೊಂದಿಗೆ ನಮ್ಮ ಯಮಕನಮರಡಿ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿಯೂ ನನ್ನ ಬೆಂಬಲಕ್ಕೆ ಅಥಣಿಯಲ್ಲಿ ಲಕ್ಷ್ಮಣ ಸವದಿ ಸರ್ ಚಿಕ್ಕೋಡಿ ವಲಯದಲ್ಲಿ ಪ್ರಕಾಶ ಹುಕ್ಕೇರಿ ಸರ್, ರಾಜು ಕಾಗೆ ಸರ್, ಸೇರಿದಂತೆ ಚಿಕ್ಕೋಡಿ ಲೋಕಸಭೆ ಕ್ಷೇತ್ರದಾದ್ಯಂತ ಕಾಂಗ್ರೇಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಸಹಕಾರ ಬೆಂಬಲವಿದೆ, ನಮ್ಮ ಮೇಲೆ ವಿಶ್ವಾಸವಿಟ್ಟವರ ಸೇವೆಗೆ ನಾವು ಸಿದ್ದರಿದ್ದು ಈ ಚುನಾವಣೆಯಲ್ಲಿ ಉತ್ತಮವಾದ ಬೆಂಬಲ ವ್ಯಕ್ತವಾಗುತ್ತಿದೆ, ರಾಜ್ಯದಲ್ಲಿ ಕಾಂಗ್ರೇಸ್ ಪಕ್ಷದ ಗ್ಯಾರಂಟಿಗಳು ಮತ್ತಷ್ಟು ಪ್ರಭಾವ ಬೀರುತ್ತವೆ,

ಕ್ಷೇತ್ರದ ಜನರ ಆಶಿರ್ವಾದ:–ಯಮಕನಮರಡಿ ಕ್ಷೇತ್ರದ ಜನ ಪಕ್ಷಾತೀತವಾಗಿ ಈ ಚುನಾವಣೆಯಲ್ಲಿ ಕಾರ್ಯನಿರ್ವಹಿಸುವ ವಿಶ್ವಾಸ ನಮಗಿದೆ ಪ್ರಚಾರಕ್ಕೆ ಹೊದಲ್ಲೆಲ್ಲಾ ಮನೆಮಗಳಂತೆ ನೊಡಿಕೊಮಡು ಪ್ರೋತ್ಸಾಹಿಸುತ್ತಿದ್ದ ಯಮಕನಮರಡಿ ಕ್ಷೇತ್ರದ ನಮ್ಮ ಜನರ ಸಹಕಾರ ಮರೆಯಲಸಾಧ್ಯ, ಎಂದರು,

ವೇದಿಕೆಯಲ್ಲಿದ್ದ ಚಂದ್ರಕಾಂತ ಪಾಟೀಲ ಮಾತನಾಡಿ ಬಿ,ಜೆ,ಪಿ, ಪ್ರಧಾನ ಹೇಳಿದಂತೆ ಉದ್ಯೋಗ ಸೃಷ್ಟಿ ಆಗಲಿಲ್ಲಾ ಅಂದಿನ ಪ್ರಧಾನ ಅಟಲ ಬಿಹಾರಿ ವಾಜಪೇಯಿ ಇಂದಿರಾಗಾಂಧಿಜಿಯವರನ್ನು ಭಾರತ ದೇಶದ ದುರ್ಗಾಮಾತೆ ಎಂದರು ಆ ದಿಸೆಯಲ್ಲಿ ಚಿಕ್ಕೋಡಿ ಕ್ಷೇತ್ರದಿಂದ ದೇಶದಲ್ಲಿ ಹೆಚ್ಚು ಮತಗಳಿಸಿ ಆಯ್ಕೆಯಾಗುವ ಕಿರಿಯ ಸಂಸದೆಯಾಗುವಲ್ಲಿ ಸಂಶಯವಿಲ್ಲಾ ಎಂದರು, ಶಹನಾಜ ಗಡೇಕಾಯಿ ಮಾತನಾಡಿ ದವಾ ಔರ ದುವಾ...। ಎರಡು ಗಟ್ಟಿಯಿದ್ದಾಗ ಆಯ್ಕೆ ಖಚಿತವಾಗುತ್ತದೆ ದವಾ ಎಂದರೆ.... ನಮ್ಮ ಕಾರ್ಯ ಹಾಗೂ ದುವಾ ಎಂದರೆ ಜನಾಶಿರ್ವಾದ ಎಂದು ವಿಶ್ಲೇಷಿಸಿದರು, ಪಿ,ಎಚ್,ಪಾಟೀಲ, ಸಿ,ಡಿ, ಪಾಟೀಲ, ಸುಧೀರ ಗಿರಿಗೌಡರ, ರಾಜು ಅವಟೆ, ಬಸೀರ ಲಾಡಖಾನ್, ಪರಶುರಾಮ ದಂಡಗಿದಾಸ, ಮಲ್ಲಪ್ಪಾ ನಾಯಿಕ, ಮಹಾಂತೇಶ ಮಗದುಮ್ಮ, ಅಂಜನಾ ಹೆಬ್ಬಾಳಿ, ಶಹನಾಜ ಗಡೇಕಾಯಿ, ಜಂಗುದ್ದಿನ್ ದ್ರಾಕ್ಷಿ, ಪರಶುರಾಮ ತಳವಾರ, ಬೆಳಗಾವಿ ಮಹಾನಗರ ಸಭೆ ಸದಸ್ಯೆ ಜಯಶ್ರೀ ಮಾಳಗಿ, ಮಲ್ಲಪ್ಪಾ ಮುಗಳಿ, ಆನಂದ ಪಾಟೀಲ, ಮಲ್ಲಪ್ಪಾ ಬಡಕುಂದ್ರಿ, ಥಳೆಪ್ಪಾ ಜಕ್ಕಪ್ಪಗೋಳ, ಸುದರ್ಶನ ತೊರಗಲ್ಲಿ, ಆನಂದ ಸ್ವಾಮಿ ತವಗಮಠ, ಮುಂತಾದವರು ಉಪಸ್ಥಿತರಿದ್ದರು.

ವಿವಿಧೆಡೆ ತಂಬಾಕು ನಿಯಂತ್ರಣ ಕೋಟ್ಪಾ ಕಾಯ್ದೆ ಉಲ್ಲಂಘನೆ ವಿರುದ್ಧ ಕ್ರಮ

ಗದಗ ಮಾರ್ಚ : ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ವೆಂಕಟೇಶ ರಾಥೋಡ ಅವರ ಮಾರ್ಗದರ್ಶನದಲ್ಲಿ ಮಾರ್ಚ ತಿಂಗಳಲ್ಲಿ ಜಿಲ್ಲಾ ತಂಬಾಕು ನಯಂತ್ರಣ ತನಿಖಾ ದಳ ಹಾಗೂ ತಾಲೂಕಾ ತಂಬಾಕು ನಯಂತ್ರಣ ತನಿಖಾ ದಳ ಗದಗ, ಮುಂಡರಗಿ, ರೋಣ, ವತಿಯಿಂದ ಗದಗ ನಗರದ ಮುಳಗುಂದ ನಾಕಾ, ಜಿಲ್ಲಾ ಆಸ್ಪತ್ರೆ ಆವರಣ, ಅಂಜುಮನ್ ಕಾಲೇಜು ಎದುರು, ಹಾತಲಗೇರಿ ನಾಕಾ, ಅಡವಿಸೋಮಪುರ, ಲಕ್ಕುಂಡಿ, ಮುಂಡರಗಿ, ಗಜೇಂದ್ರಗಡ,ಮುಂಡರಗಿ ಕೊರ್ಲಳ್ಳಿ ಕ್ರಾಸ್, ಡಂಬಳ, ಇತರೆ ಸ್ಥಳಗಳಲ್ಲಿ ಕೋಟ್ಪಾ ದಾಳಿ ಹಮ್ಮಿಕೊಳ್ಳಲಾಯಿತು.

ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮ ಹಾಗೂ ತಂಬಾಕು ನಯಂತ್ರಣ ಕಾಯ್ದೆ ಕೋಟ್ಪಾ–2003ರ ಕುರಿತು ಸಾರ್ವಜನಕರಲ್ಲಿ ಹಾಗೂ ಅಂಗಡಿಕಾರರಲ್ಲಿ ಜಾಗೃತಿ ಮೂಡಿಸಲಾಯಿತು, ವಿದ್ಯಾರ್ಥಿಗಳು ತಂಬಾಕು ಉತ್ಪನ್ನಗಳಿಂದ ದೂರವಿರುವಂತೆ, ಚಟಕ್ಕೆ ಬಲಿಯಾಗದಂತೆ ಮಾಡುವ ಉದ್ದೇಶದಿಂದ ಶಾಲಾ ಕಾಲೇಜು ಆವರಣದಿಂದ 100 ಗಜದ ವರೆಗೆ ತಂಬಾಕು ಮಾರಾಟ ನಷೇಧ ಸಾರ್ವಜನಕ ಸ್ಥಳಗಳಲ್ಲಿ ಧೂಮಪಾನ ನಷೇಧದ ಕುರಿತು ಪ್ರತಿಯೊಂದು ಸಾರ್ವಜನಕ ಸ್ಥಳಗಳಲ್ಲಿ ನಾಮಫಲಕ ಬಿತ್ತರಿಸುವದು ಅ ಸ್ಥಳದ ಮಾಲೀಕರ ಜಾವಾಬ್ದಾರಿಯಾಗಿರುತ್ತದೆ ಹಾಗೂ ಕೆಲವು ಅಂಗಡಿಗಳ ಹಿಂದೆ ಧೂಮಪಾನ ಅಡ್ಡಾಗಳನ್ನು ಮಾಡಿಕೊಂಡಿರುವವರ ವಿರುದ್ಧ ಕೂಡಾ ಕ್ರಮ ವಹಿಸಲಾಯಿತು. ಸಾರ್ವಜನಕ ಸ್ಥಳಗಳಲ್ಲಿ ಧೂಮಪಾನ ಮಾಡುವವದರಿಂದ ಅಮಾಯಕರ ಆರೋಗ್ಯದ ಮೇಲೆ ಪರಿಣಾಮಬೀರುತ್ತಿರುವದು ಕಂಡು ಬಂದಿದೆ, ತಂಬಾಕು ಕುರಿತ ಜಾಹಿರಾತು ನಷೇದಿಸುವದು, 18 ವರ್ಷದೋಳಗಿನವರಿಗೆ ತಂಬಾಕು ನಷೇಧಿಸುವದು,ತಂಬಾಕು ಉತ್ಪನ್ನಗಳ ಪ್ಯಾಕ್ ಮೇಲೆ ಶೇ 85% ರಷ್ಟುಅರೋಗ್ಯಎಚ್ಚರಿಕೆಚಿನ್ಹೆ ಕಡ್ಡಾಯ ಈ ಕುರಿತು ಮಾಹಿತಿ ಹಾಗೂ ಜಾಗೃತಿ ಮೂಡಿಸಿ ಉಲ್ಲಂಘನೆ ಮಾಡಿದವರ ವಿರುದ್ಧ ಎಚ್ಚರಿಕೆ ನೀಡಿ ಒಟು ?ಟ83 ಪ್ರಕರಣ ದಾಖಲಿಸಿ ರೂ. 16350/– ದಂಡ ಸಂಗ್ರಹಿಸಲಾಯಿತು. ತಂಬಾಕು ಉತ್ಪನ್ನಗಳ ಮಾರಾಟ ಹಾಗೂ ಅದರ ಉಪಯೋಗ ಕೋಟ್ಪಾ ಕಾಯ್ದೆ ಅಡಿಯಲ್ಲಿ ಅವಕಾಶವಿದ್ದು ಅದನ್ನು ಉಲ್ಲಂಘಿಸಿದಲ್ಲಿ ಕಾನೂನು ರೀತಿಕ್ರಮ ವಹಿಸಲಾಗುವದು.

ದಾಳಿಯಲ್ಲಿ ಜಿಲ್ಲಾ ತಂಬಾಕು ನಯಂತ್ರಣ ಕೋಶದ ಸಲಹೆಗಾರರಾದ ಗೋಪಾಲ ಸುರಪುರ ಪೋಲೀಸ್ ಇಲಾಖೆಯ ಶ್ರೀಮತಿ ಬಿ.ಎನ್ ಚಳಗೆರಾ, ಎಂ.ಆಯ್. ಮುಲ್ಲಾ , ಎ.ಎಸ್.ಐ. , ಕುಮಾರಸ್ವಾಮಿ, ಸಚಿನ್ ರೆಷ್ಮಾ ಬೆಗಂ, ನಧಾಫ್ ,ವೈ.ಎನ್.ಕಡೆಮನಿ ಹಾಗೂ ಶ್ರೀಮತಿ ಮಂಜುಳಾ ಸಜ್ಜನ್ ತಾಲೂಕಾ ಆರೋಗ್ಯ ಶಿಕ್ಷಣಾಧಿಕಾರಿಗಳು ಮುಂಡರಗಿ, ಎಂ.ಎಂ ದೊಡ್ಡಮನಿ ಉಪಸ್ಥಿತರಿದ್ದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಬೆಳಗಾವಿ: ಅಖಿಲ ಭಾರತ ಕವಯಿತ್ರಿಯರ ಸಂಘಟನೆ ಬೆಳಗಾವಿ ಘಟಕ, ಕರ್ನಾಟಕ ಲೇಖಿಕಿಯರ ಸಂಘ ಬೆಳಗಾವಿ ಶಾಖೆ ಹಾಗೂ ಪೃಥ್ವಿ ಫೌಂಡೇಶನ್ ಇವುಗಳ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಪುಸ್ತಕಗಳ ಬಿಡುಗಡೆ ಹಾಗೂ ಬಹುಭಾಷಾ ಕವಿಗೋಷ್ಠಿ ಕಾರ್ಯಕ್ರಮವನ್ನು 23 ರಂದು ಹಮ್ಮಿಕೊಳ್ಳಲಾಗಿತ್ತು .ಲೋಕದರ್ಶನ ದಿನ ಪತ್ರಿಕೆಯ ಸುರೇಖಾ ದೇಸಾಯಿ ಕಾರ್ಯಕ್ರಮವನ್ನು ಬಲೂನ್ ಹಾರಿಸುವುದರ ಮೂಲಕ ಉದ್ಘಾಟಿಸಿದರು. ರಾಜೇಶ್ವರಿ ಹೆಗಡೆ ಅವರ ಕೃತಿ ಮೊದಲ ಹೆಜ್ಜೆ, ದೀಪಿಕಾ ಚಾಟೆ ಅವರ ಭಾವಗಳ ಮೆರವಣಿಗೆ, ಅನ್ನಪೂರ್ಣಾ ಹಿರೇಮಠ ಅವರ ಮೌನ ವೀಣೆ ನುಡಿದಾಗ ಹಾಗೂ ಜ್ಯೋತಿ ಬದಾಮಿ ಅವರ ಓಷಿಯಾನಿಯಾ ಕೃತಿಗಳನ್ನು ಪ್ರೇಮಾ ತಹಸೀಲದಾರ, ಲಲಿತಾ ಕೋಪರ್ಡೆ, ಹಮೀದಾ ಬೇಗಂ ದೇಸಾಯಿ ಹಾಗೂ ಶೋಭಾ ಕುಲಕರ್ಣಿ, ಜಯಶೀಲಾ ಬ್ಯಾಕೋಡ ಇವರು ಲೋಕಾರ್ಪಣೆ ಮಾಡಿದರು.

ಬಹು ಭಾಷಾ ಕವಿಗೋಷ್ಠಿಯಲ್ಲಿ ವಿದ್ಯಾ ಹುಂಡೇಕರ, ಸುಷ್ಮಾ ಜಗಜಂಪಿ,ಮಮತಾ ಶಂಕರ್,ಹೀರಾ ಚೌಗುಲೆ, ದಾನಮ್ಮ ಅಂಗಡಿ,ಮಹಾನಂದ ಪರುಶೆಟ್ಟಿ, ರೇಣುಕಾ ವಾಲಿ, ಡಾ.ಮೈತ್ರೇಯಿಣಿ,ಡಾ.ಭಾರತಿ ಮಠದ, ಲಲಿತಾ ಪರ್ವತರಾವ್,ಮಂಗಲಾ ಅರಳಿಮಟ್ಟಿ,ಸುನಂದಾ ಹಾಲಭಾವಿ,ಸುಮಾ ಕಿತ್ತೂರು ಮುಂತಾದವರು ಕನ್ನಡ, ಹಿಂದಿ,ಮರಾಠಿ ಹಾಗು ಇಂಗ್ಲೀಷ್ ಕವನಗಳನ್ನು ವಾಚಿಸಿದರು.

ಇದೆ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ರಾಜೇಶ್ವರಿ ಹೆಗಡೆ ಅವರಿಗೆ ಅನುಪಮ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೊತೆಗೆ ಕಸಾಪ ಬೆಳಗಾವಿ ತಾಲೂಕು ಸಮ್ಮೇಳನ ದ ಸರ್ವಾಧ್ಯಕ್ಷೆಯಾಗಿದ್ದ ನಮಿತ್ತ ಜ್ಯೋತಿ ಬದಾಮಿ ಯವರಿಗೆ ಮೂರೂ ಸಂಸ್ಥೆ ಗಳಿಂದ ಗೌರವಿಸಲಾಯಿತು.ಪಾರ್ವತಿ ಪಿಟಗಿ, ಜ್ಯೋತಿ ಕಟ್ಟಿ, ಭುವನೇಶ್ವರಿ ಪೂಜೇರಿ,ಉಮಾ ನೇಸರ್ಗಿ, ಉಪಸ್ಥಿತರಿದ್ದರು.ಶೈಲಾ ಹಿರೇಮಠ ಪ್ರಾರ್ಥನೆ ಹಾಗು ಎಐಪಿಸಿ ಕಾರ್ಯದರ್ಶಿ ಶೈಲಜಾ ಕುಲಕರ್ಣಿ ಎಐಪಿಸಿ ಕುಲಗೀತೆ ಹಾಡಿದರು.ಪೃಥ್ವಿ ಫೌಂಡೇಶನ್ ಅಧ್ಯಕ್ಷೆ ಹೇಮಾವತಿ ಸೊನೊಳಿ ನರೂಪಿಸಿದರು.ಕಲೇಸಂ ಕಾರ್ಯದರ್ಶಿ ಡಾ.ನಿರ್ಮಲಾ ಬಟ್ಟಲ ಪರಿಚಯಿಸಿದರು. ಕಲೇಸಂ ಸಹ ಕಾರ್ಯದರ್ಶಿ ರಾಜನಂದಾ ಗಾರ್ಗಿ ಸ್ವಾಗತಿಸಿದರು, ಕಲೇಸಂ ಉಪಾಧ್ಯಕ್ಷೆ ಜ್ಯೋತಿ ಬದಾಮಿ ವಂದಿಸಿದರು.ಕಲೇಸಂ ಕಾರ್ಯದರ್ಶಿ ಡಾ.ನಿರ್ಮಲಾ ಬಟ್ಟಲ ಪರಿಚಯಿಸಿದರು. ಕಲೇಸಂ ಸಹ ಕಾರ್ಯದರ್ಶಿ ರಾಜನಂದಾ ಗಾರ್ಗಿ ಸ್ವಾಗತಿಸಿದರು, ಕಲೇಸಂ ಉಪಾಧ್ಯಕ್ಷೆ ಜ್ಯೋತಿ ಬದಾಮಿ ವಂದಿಸಿದರು.

ಅಪರಿಚಿತ ವ್ಯಕ್ತಿ ಶವ ಪತ್ತೆ

ಬೆಳಗಾವಿ, ಮಾ.: ಬೆಳಗಾವಿಯಲ್ಲಿರುವ ಒಂದು ಟ್ರಾವೆಲ್ಸ್ ಬಸ್ಸನಲ್ಲಿ ಮಾ. 23 ರಂದು ಯಾವುದೋ ಕಾಯಿಲೆಯಿಂದ ಬಳಲಿ ಬಸ್ಸಿನಲ್ಲಿ ಮೃತಪಟ್ಟಿದ್ದು, ಮೃತನ ಶವವನ್ನು ಮಾ. 23 ರಿಂದ ಜಿಲ್ಲಾ ಆಸ್ಪತ್ರೆ ಶವಾಗಾರದ ಶಿತಾಗಾರದಲ್ಲಿ ಇರಿಸಲಾಗಿದೆ.

ವ್ಯಕ್ತಿಯ ವಿವರ: ವಯಸ್ಸು ಸುಮಾರು 40–45 ವರ್ಷ, ಎತ್ತರ 5 ಪೂಟ 2 ಇಂಚು, ಬಿಳಿ ಬಣ್ಣದ ಹಾಪ್ ಪ್ಯಾಂಟ್ ಧರಿಸಿರುತ್ತಾನೆ. ಸದರಿ ಮೃತನ ಬಗ್ಗೆ ಮಾಹಿತಿ ಅಥವಾ ವಾರಸುದಾರರು ಸಿಕ್ಕಲ್ಲಿ ಕ್ಯಾಂಪ್ ಪೋಲೀಸ್ ಠಾಣೆಯ ಇನ್ಸಪೆಕ್ಟರ ಅಥವಾ ಪೋಲೀಸ್ ಕಂಟ್ರೋಲ್ ರೂಂ ನಂ: 08312405234 ಅಥವಾ 08312405255 ಇವರಿಗೆ ಸಂಪರ್ಕಿಸಬಹುದು ಎಂದು ಬೆಳಗಾವಿ ಕ್ಯಾಂಪ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯರಗಟ್ಟಿ : ಪಟ್ಟಣದಲ್ಲಿ ಮಹಿಳೆಯರು ಮತ್ತು ಮಕ್ಕಳು, ಜನರು ತಮ್ಮ ಸ್ನೇಹಿತರಿಗೆ, ಬಂಧು ಗಳಿಗೆ ಹಾಗೂ ಆತ್ಮೀಯರಿಗೆ ಬಣ್ಣ ಎರಚಿದರು. ಬಣ್ಣದಾಟದಿಂದ ದೂರ ಉಳಿದವರನ್ನು ಹಬ್ಬಕ್ಕೆ ಎಳೆದು ತಂದು ಸಂಭ್ರಮಿಸಿದರು.

ವಾ. ಕ. ರ. ಸಾ. ಸಂಸ್ಥೆಯಿಂದ ಹೆಚ್ಚುವರಿ ವಿಶೇಷ ಸಾರಿಗೆಗಳ ಕಾರ್ಯಾಚರಣೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗದಗ
ಹಾರ್ದಿಕ ಸ್ವಾಗತ

ಗದಗ ಮಾರ್ಚ28; 2024 ನೇ ಸಾಲಿನ ಗುಡ್‌ಫ್ರೈಡೆ ರಜೆ ಪ್ರಯುಕ್ತ ಸಾರ್ವಜನಕರು ತಮ್ಮ ಸ್ವಂತ ಊರುಗಳಿಗೆ ತೆರಳುವುದರಿಂದ ವಾ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಸುಮಾರು 100 ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಮಾರ್ಚ 29 ರಂದು ಗುಡ್ ಪ್ರೈಡೇ, ಮಾರ್ಚ 30 ಮತ್ತು 31 ರಂದು ಶನವಾರ ಮತ್ತು ರವಿವಾರ ವಾರಾಂತ್ಯ ಇರುವುದರಿಂದ ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ಹೆಚ್ಚಿನ ಹೆಚ್ಚಿನ ಪ್ರಯಾಣಿಕರು ತಮ್ಮ ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುವುದು. ಬೆಂಗಳೂರಿನಂದ ರಾಜ್ಯ/ಅಂತರರಾಜ್ಯದ ವಿವಿಧ ಸ್ಥಳಗಳಿಗೆ ತೆರಳಲು ಮಾರ್ಚ 28 ರಿಂದ ಮಾರ್ಚ 30 ರವರೆಗೆ ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ರಜೆ ಮುಗಿದ ಮೇಲೆ ಮಾರ್ಚ 31 ರಂದು ಮತ್ತು ನಂತರದ ದಿನಗಳಂದು ಪ್ರಮುಖ ಸ್ಥಳಗಳಿಂದ ಜನದಟ್ಟಣೆಗೆ ಅನುಗುಣವಾಗಿ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುವುದು. ವಿಶೇಷ ಸಾರಿಗೆಗಳ ಸದುಪಯೋಗ ಪಡಿಸಿಕೊಳ್ಳುವದರೊಂದಿಗೆ, ಸುಖಕರ ಹಾಗೂ ಸುರಕ್ಷಿತ ಪ್ರಯಾಣಕ್ಕಾಗಿ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸುವಂತೆ ಮತ್ತು ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಾರ್ವಜನಕ ಸಂಪರ್ಕಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದೆ.

ಆರೋಗ್ಯ ತಪಾಸಣಾ ಕಿಟ್ ವಿತರಣೆ

Mangalore Refinery and Petrochemicals Limite
Medical Kit

ಗದಗ ಮಾರ್ಚ 28: ಗದಗ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ , ಜಿಲ್ಲಾ ಸಮೀಕ್ಷಾ ಘಟಕ ಹಾಗೂ ಎಮ್.ಆರ್.ಪಿ.ಸಿ.ಎಲ್. (ಮಂಗಳೂರು ರಿಫೈನರಿ ಆ್ಯಂಡ ಪೆಟ್ರೋ ಕೆಮಿಕಲ್ಸ ಲಿಮಿಟೆಡ್)ಮಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಗದಗ ತಾಲೂಕಾ ಆರೋಗ್ಯಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಮಂಗಳವಾರ ಆರೋಗ್ಯ ತಪಾಸಣಾ ಕಿಟ್ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು, ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ವೆಂಕಟೇಶ ರಾಥೋಡ್ ಅವರು ಮಾತನಾಡುತ್ತಾ ಜಿಲ್ಲೆಯಲ್ಲಿ ಎನ್.ಸಿ.ಡಿ. ಕಾರ್ಯಕ್ರಮದಡಿಯಲ್ಲಿ ಆರೋಗ್ಯ ಸಂಸ್ಥೆಗಳ ಮೂಲಕ ಸಾರ್ವಜನಕ ಉಪಯೋಗಕ್ಕಾಗಿ ಮಧುಮೇಹ, ರಕ್ತದೊತ್ತಡ, ಇತರೆ ಖಾಯಿಲೆಗಳ ತಪಾಸಣ ಮಾಡಲಾಗುತ್ತಿದ್ದು, ಇಂತಹ ತಪಾಸಣಾ ಕಾರ್ಯಕ್ಕೆ ಸಾಕಷ್ಟು ಪ್ರಮಾಣದಲ್ಲಿ ಅತ್ಯಂತ ಅವಶ್ಯಕವಾಗಿ ಬೇಕಾದ ವೈದ್ಯಕೀಯ ಉಪಕರಣಗಳು, ಸಲಕರಣೆಗಳನ್ನು ಸಾರ್ವಜನಕ ಉಪಯೋಗಕ್ಕಾಗಿ ಮಂಳೂರು ಮೂಲದ ಮಂಗಳೂರು ರಿಫೈನರಿ ಆ್ಯಂಡ ಪೆಟ್ರೋ ಕೆಮಿಕಲ್ಸ ಲಿಮಿಟೆಡ್ ಕಂಪನಯು ತಮ್ಮ ಸಿ.ಎಸ್.ಆರ್. ನಧಿಯಲ್ಲಿ ಜಿಲ್ಲೆಯ 13 ಆರೋಗ್ಯ ಸಂಸ್ಥೆಯಲ್ಲಿನ ಎನ್.ಸಿ.ಡಿ ಕ್ಲೀನಿಕ್‌ಗಳಿಗೆ ಸುಮಾರು 16.5 ಲಕ್ಷ ರೂಪಾಯಿ ಮೌಲ್ಯದ ಕಿಟ್ ವಿತರಣೆ ಮಾಡುವದರ ಮೂಲಕ ಜಿಲ್ಲೆಯ ಕಟ್ಟಕಡೆ ವ್ಯಕ್ತಿಯ ಅರೋಗ್ಯ ತಪಾಸಣೆ ಮಾಡಿ ರೋಗದ ತೀವ್ರತೆಯನ್ನು ಹಾಗೂ ರೋಗಬರದಂತೆ ಮುಂಜಾಗರೂಕತೆಯನ್ನು ಕೈಗೊಳ್ಳಲು ಅನುಕೂಲಕರವಾಗುವದು ಎಂದು ತಿಳಿಸಿದರು. ವಿತರಿಸಲಾದ ಕಿಟ್‌ಗಳನ್ನು ಉತ್ತಮವಾಗಿ ಸಾರ್ವಜನಕ ಉಪಯೋಗಕ್ಕಾಗಿ ಬಳಸಿಕೊಳ್ಳಲಾಗುವದು ಎಂದು ಆಶ್ವಾಸನೆ ನೀಡಿದರು.

ಎಮ್.ಆರ್.ಪಿ.ಸಿ.ಎಲ್. ಮಂಗಳೂರು ಕಂಪನಯ ಎಕ್ಸಿಕ್ಯೂಟಿವ್ ಸಿ.ಎಸ್.ಆರ್.ಸ್ಟೀವನ್ ಪಿಂಟೋ ಮಾತನಾಡುತ್ತ ನಾವು ನಮ್ಮ ಕಂಪನಯ ಸಿ.ಎಸ್.ಆರ್. ನಧಿಯ ಮೂಲಕ ಕೇವಲ ಮಂಗಳೂರಿಗೆ ಮಾತ್ರ ಸಿಮಿತವಾಗಿರದೆ ರಾಷ್ಟ್ರವ್ಯಾಪಿ ಸಮಾಜದ ಏಳಿಗೆಗಾಗಿ ಶಿಕ್ಷಣ, ಆರೋಗ್ಯ, ಸಂಸ್ಕೃತಿ, ಪ್ರಕೃತಿ ಹೀಗೆ ಹಲವಾರು ಕ್ಷೇತ್ರಗಳಿಗೆ ಸೇವೆ ನೀಡುತ್ತಿದ್ದು ಪ್ರಮುಖವಾಗಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿ ಸಾರ್ವಜನಕ ಉಪಯೋಗಕ್ಕಾಗಿ ಆರೋಗ್ಯ ತಪಾಸಣಾ ಸಲಕರಣೆ, ಉಪಕರಣಗಳನ್ನು ವಿತರಿಸುವ ಕಾರ್ಯ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲೂಕಾ ಅರೋಗ್ಯಾಧಿಕಾರಿ ಡಾ.ಪ್ರೀತ್ ಖೋನ, ವೈದ್ಯಾಧಿಕಾರಿ ಡಾ.ಶರಣು ಗಾಣಗೇರ, ಡಾ. ಚೇತನ್.ಎಚ್.ಎಚ್. ಡಾ. ರವಿ ಕಡಗಾವಿ ಹಾಗೂ ಜಿಲ್ಲಾ ಸಮೀಕ್ಷಾ ಘಟಕದ ,ಪ್ರಾ.ಥಮಿಕ ಆರೋಗ್ಯ ಕೇಂದ್ರದ ,ಎನ್.ಸಿ.ಡಿ. ಕ್ಲಿನಕ್‌ನ ಸಿಬ್ಬಂದಿಗಳು ಭಾಗವಹಿಸಿದರು.

ಗ್ರಾಮೀಣ ಭಾಗದಲ್ಲಿ ಗುಳೆ ತಪ್ಪಿಸಲು ನಿಮ್ಮ ಸಹಕಾರ ಬಹಳ ಅವಶ್ಯ : ವಿ. ಎಸ್.ಸಜ್ಜನ

ರೋಣ : ಗ್ರಾಮೀಣ ಭಾಗದಲ್ಲಿ ಬೇಸಿಗೆ ಕಾಲದಲ್ಲಿ ಕೆಲಸವಿಲ್ಲದೇ ಗುಳೆ ಹೋಗುತ್ತಾರೆ, ಅದನ್ನು ತಪ್ಪಿಸಲು ನಮ್ಮೆಲ್ಲರ ಸಹಕಾರ ಬಹಳ ಮುಖ್ಯ ಪ್ರತಿ ಮನೆಗೆ ಹೋಗಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಏಪ್ರಿಲ್ 1 ರಿಂದ ಸಮುದಾಯ ಕಾಮಗಾರಿ ಪ್ರಾರಂಭವಾಗುತ್ತದೆ ಎಂಬುದನ್ನು ಮನವರಿಕೆ ಮಾಡಿ ಗುಳೆ ತಪ್ಪಿಸಿ ಎಂದು ಜಿಲ್ಲಾ ಮಾಹಿತಿ ಶಿಕ್ಷಣ & ಸಂವಹನ ಸಂಯೋಜಕರಾದ ವಿ.ಎಸ್ ಸಜ್ಜನ ಹೇಳಿದರು.

ರೋಣ ತಾಲೂಕಿನ ಸವಡಿ ಗ್ರಾಮ ಪಂಚಾಯತಿ ಯಲ್ಲಿ "ವಲಸೆ ಯಾಕ್ರೀ ನಮ್ಮೂರಲ್ಲೇ ಉದ್ಯೋಗ ಖಾತ್ರಿ ದುಡಿಮೆ ಖಾತ್ರಿ" ಅಭಿಯಾನದಡಿ ಕಾಯಕ ಬಂಧುಗಳ, ಸ್ವಸಹಾಯ ಸಂಘಗಳ ಸದಸ್ಯರ ಕೂಲಿಕಾರರ ಸಭೆ ನಡೆಸಲಾಯಿತು. ಈ ವೇಳೆ ಮಾತನಾಡಿದ ಜಿಲ್ಲಾ ಮಾಹಿತಿ ಶಿಕ್ಷಣ & ಸಂವಹನ ಸಂಯೋಜಕರಾದ ವಿ.ಎಸ್. ಸಜ್ಜನ ರವರು ಎಪ್ರಿಲ್ 1 ರಿಂದ ನಮ್ಮ ಗ್ರಾಮದಲ್ಲಿ ಸಮುದಾಯ ಕಾಮಗಾರಿ ಪ್ರಾರಂಭಿಸಲು ತಯಾರಿ ಮಾಡಿಕೊಳ್ಳಲಾಗಿದೆ. ಈಗಾಗಲೇ ಎಲ್ಲಾ ಗ್ರಾಮ ಪಂಚಾಯತಿ ಅಧಿಕಾರಿಗಳಿಗೆ ಜಿ.ಪಂ ಸಿಇಓ ಅವರು ತಿಳಿಸಿದ್ದಾರೆ ಹಾಗಾಗಿ ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕೆಲಸ ಪ್ರಾರಂಭವಾಗುತ್ತದೆ. ಕಾಯಕ ಬಂಧುಗಳಾದ ತಾವೆಲ್ಲರೂ ಕೂಲಿಕಾರರ ಆರ್ಥಿಕ ಸಬಲತೆಗಾಗಿ ದುಡಿಯಬೇಕು. ಬಂಧು ಅಂದರೆ ಜನರಿಗೆ ಹತ್ತಿರ ಇದ್ದವರು ಅಂತಾ ಅರ್ಥ ಹಾಗಾಗಿ ದುಡಿಯುವ ವರ್ಗಕ್ಕೆ ಹತ್ತಿರ ಇರುವ ತಮಗೆ ಕಾಯಕ ಬಂಧುಗಳು ಎನ್ನಲಾಗುತ್ತದೆ. ಕೆಲಸದ ಸ್ಥಳದಲ್ಲಿ ನೀರು, ನೆರಳು ಸೇರಿದಂತೆ ಮಕ್ಕಳಿಗಾಗಿಯೇ ಗ್ರಾಮದಲ್ಲಿ ಕೂಸಿನ ಮನೆ ಸಹ ತೆರಯಲಾಗಿದ್ದು ಪಾಲಕರು ಮಕ್ಕಳನ್ನು ಅಲ್ಲಿ ಬಿಟ್ಟು ಹೋಗಬೇಕು ಅದನ್ನು ನೀವು ಜನರಿಗೆ ತಿಳಿಸಬೇಕು ಎಂದರು. ಮುಖ್ಯವಾಗಿ ಕೆಲಸಕ್ಕೆ ಬಂದವರಿಗೆ ಅಳತೆ ತಕ್ಕ ಹಾಗೆ ಕಡೆಯುವದು ಕಡ್ಡಾಯ, ಒಬ್ಬರಿಗೆ ಒಂದು ಅಳತೆ ಮತ್ತೊಬ್ಬರಿಗೆ ಒಂದು ಅಳತೆ ಹೀಗೆ ತಾರತಮ್ಯ ಮಾಡದ ಹಾಗೆ ಕೆಲಸ ಮಾಡುವದು ತಮ್ಮ ಕರ್ತವ್ಯ ದಯವಿಟ್ಟು ಪಾಲಿಸಿ ಅಂತಾ ಮನವಿ ಮಾಡಿದರು.

ಕೊನೆಯಲ್ಲಿ ಕಡ್ಡಾಯವಾಗಿ ಈಬಾರಿ ಗ್ರಾಮ ಪಂಚಾಯತಿ ಯಿಂದ ನೊಂದಾಯಿಸಲ್ಪಟ್ಟ ಕುಟುಂಬ ಗಳಲ್ಲಿ ನರೇಗಾ ಯೋಜನೆಯಡಿ ಸಕ್ರಿಯವಲ್ಲದ ಇರುವವರನ್ನು ಗುರುತಿಸಿ ಸದರಿಯವರನ್ನು ಪಾಲ್ಗೊಳ್ಳುವಂತೆ ಮಾಡಲು ಮನೆ ಮನೆಗೆ ತೆರಳಿ ಯೋಜನೆಯಡಿ ದೊರೆಯುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸುವಂತೆ ತಿಳಿಸಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಸವರಾಜ ಶ್ರೀಂಗೇರಿ, ತಾಲೂಕ ಮಾಹಿತಿ ಶಿಕ್ಷಣ & ಸಂವಹನ ಸಂಯೋಜಕ ಮಂಜುನಾಥ , ಬಿ ಎಫ್ ಟಿ ಈರಣ್ಣ ಬೇಲೇರಿ, ಜಿಕೆಎಮ್ ಚಾಂದಬಿ ಕರ್ನಾಚಿ ಗ್ರಾಮ ಪಂಚಾಯಿತಿ ಸದಸ್ಯರು, ಕಾಯಕ ಬಂಧುಗಳು , ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಇದ್ದರು.ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಸವರಾಜ ಶ್ರೀಂಗೇರಿ, ತಾಲೂಕ ಮಾಹಿತಿ ಶಿಕ್ಷಣ & ಸಂವಹನ ಸಂಯೋಜಕ ಮಂಜುನಾಥ , ಬಿ ಎಫ್ ಟಿ ಈರಣ್ಣ ಬೇಲೇರಿ, ಜಿಕೆಎಮ್ ಚಾಂದಬಿ ಕರ್ನಾಚಿ ಗ್ರಾಮ ಪಂಚಾಯಿತಿ ಸದಸ್ಯರು, ಕಾಯಕ ಬಂಧುಗಳು , ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಇದ್ದರು.